# ಸಂಪಾದಕೀಯ

ಬರವಣಿಗೆ ಮತ್ತು ಮಾತು ಇವೆರಡೂ ಸಹ ಮನುಷ್ಯನ ಆಲೋಚನೆಗಳ ಅಭಿವ್ಯಕ್ತಿಗೆ ಇರುವ ಸಶಕ್ತ ಮಾಧ್ಯಮಗಳು. ಈ ಮಾಧ್ಯಮಗಳ ಮೂಲಕ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮನೋಧೋರಣೆಯನ್ನು ವ್ಯಕ್ತಪಡಿಸಬಲ್ಲವನಾಗಿದ್ದಾನೆ.

ಪ್ರತಿಯೊಬ್ಬ ಬರಹಗಾರನು ಹಾಗೂ ಸಾಹಿತಿಯೂ ಬರವಣಿಗೆಯ ಮೂಲಕ ಹಾಗೂ ತನ್ನ ಮಾತುಗಳ ಮೂಲಕ ತನ್ನ ಸಿದ್ಧಾಂತವನ್ನು ಹಾಗೂ ವಿಚಾರಧಾರೆಯನ್ನು ವ್ಯಕ್ತಪಡಿಸುತ್ತಾನೆ. ಸಾಹಿತ್ಯದ ವಿಚಾರ ವಿನಿಮಯಕ್ಕೆ ಗಂಭೀರ ಚರ್ಚೆಗಳಿಗೆ ವೇದಿಕೆಯಾಗಿ ವಿಮರ್ಶಾತ್ಮಕ ಆಲೋಚನೆಗಳನ್ನು ಬೆಳೆಸುವಲ್ಲಿ ವಿಚಾರ ಸಂಕಿರಣಗಳು, ಸಮ್ಮೇಳನಗಳು ಎಂದಿಗೂ ಮಹತ್ವದ ಪಾತ್ರವನ್ನು ವಹಿಸುತ್ತ ಬಂದಿವೆ ಎಂಬುದು ನಮಗೆ ತಿಳಿದಿರುವ ಸಂಗತಿ.

ಇಂತಹ ಸಮ್ಮೇಳನಗಳು ಹಾಗೂ ವಿಚಾರ ಸಂಕಿರಣಗಳು ಯಾವುದೇ ಪಂಥೀಯ ಭೇದವಿಲ್ಲದೆ ಎಲ್ಲ ವಿಚಾರಧಾರೆಗಳ ಜನರ ಮನೋಧೋರಣೆಗಳ ಅಭಿವ್ಯಕ್ತಿಗೆ ವೇದಿಕೆಯಾಗಬೇಕಾದುದು ಅಪೇಕ್ಷಣೀಯ ಹಾಗೂ ಅಲ್ಲಿನ ವಿಚಾರಗಳ ಫಲಿತಗಳು ಆಳುವ ವರ್ಗದ ನೀತಿ ನಿರೂಪಣೆಯಲ್ಲಿಯೂ ಬಹುತೇಕ ಸಲ ಮಹತ್ವದ ಪಾತ್ರ ವಹಿಸುವುದರಿಂದ ಧರ್ಮ, ಜಾತಿ, ಲಿಂಗ ಭೇದವಿಲ್ಲದೆ ಅರ್ಹರ ವಿಚಾರಗಳಿಗೆ ನುಡಿ ಹಬ್ಬಗಳಲ್ಲಿ ವೇದಿಕೆ ದೊರೆತಾಗ ಹೆಚ್ಚು ರಚನಾತ್ಮಕ ಅಂಶಗಳು ಚರ್ಚೆಯಾಗಲು ಸಾಧ್ಯವಾಗುತ್ತದೆ.

ವಸ್ತು ನಿಷ್ಠತೆ ಎಂಬುದು ಪ್ರತಿಯೊಂದು ಕಾರ್ಯದಲ್ಲಿ ಅತ್ಯಗತ್ಯವಾದ ಹಾಗೂ ಮಹತ್ವಪೂರ್ಣವಾದ ಅಂಶವಾಗಿದೆ. ಸತ್ವ, ಪ್ರತಿಭೆಗೆ ಪ್ರಾಧಾನ್ಯತೆ ಈ ಪರಿಕಲ್ಪನೆಯ ಅಳವಡಿಕೆಯಿಂದ ಸಾಧ್ಯವಾಗುತ್ತದೆ. ವ್ಯಕ್ತಿ ನಿಷ್ಠತೆಯ ಆಧಾರದ ಮೇಲೆ ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಸಾಮೂಹಿಕ ಒಳಗೊಳ್ಳುವಿಕೆಯ ಪ್ರಜ್ಞೆಯ ಕೊರತೆ ಕಂಡು ಬರುತ್ತದೆ.

ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂದು ನಾವು ನಮ್ಮ ದೇಶದ ಕುರಿತು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಧರ್ಮ ನಿರಪೇಕ್ಷತೆ ಎಂಬುದು ಪ್ರಜಾಪ್ರಭುತ್ವದ ಮೌಲ್ಯವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದರಿಂದ ಅವಕಾಶಗಳು ಹೆಚ್ಚಿನ ಜನರಿಗೆ ಲಭಿಸಲು ಸಾಧ್ಯವಾಗುತ್ತದೆ.

“ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರಧರ್ಮಮುಮಂ ಪರ ವಿಚಾರಮುಂ” ಎಂದು ಕನ್ನಡದ ಮೊಟ್ಟ ಮೊದಲ ಕೃತಿಯಾದ ಕವಿರಾಜ ಮಾರ್ಗದ ಕರ್ತೃ ಶ್ರೀವಿಜಯನು ನಿಜವಾದ ಸಂಪತ್ತು ಎಂದರೆ ಅನ್ಯರ ಧರ್ಮವನ್ನು ಹಾಗೂ ವಿಚಾರವನ್ನು ಸೈರಿಸಿಕೊಳ್ಳುವುದಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ಕನ್ನಡ ನಾಡಿನ ಸಾಮರಸ್ಯದ ವಿಚಾರ ಧಾರೆಗೆ ನಾಂದಿ ಹಾಡಿದ್ದಾನೆಂದರೆ ಅತಿಶಯೋಕ್ತಿಯಾಗಲಾರದು.

ಈ ಬಗೆಯ ಸಾಮರಸ್ಯ, ದೇಶದ ಶಾಂತಿ, ಸಮೃದ್ಧಿಗೆ ಅತ್ಯಗತ್ಯವಾದ ಸಂಗತಿಯಾಗಿದೆ. “ಅನುಕರ್ಷ” ಬಹು ಭಾಷಿಕ ತ್ರೈಮಾಸಿಕವು ಈಗಾಗಲೇ ತಮಗೆಲ್ಲ ತಿಳಿದಿರುವಂತೆ ಕಲೆ,ಸಾಹಿತ್ಯ,ಸಾಂಸ್ಕೃತಿಕ ಅಧ್ಯಯನ, ಸಮಾಜ ವಿಜ್ಞಾನ ಹಾಗೂ ವೈಜ್ಞಾನಿಕ ಲೇಖನಗಳಿಗೂ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ.

“ಅನುಕರ್ಷ” ನ ಪ್ರಸ್ತುತ ಸಂಚಿಕೆಯು ಮಧ್ಯಕಾಲೀನ ಕನ್ನಡ ಸಾಹಿತ್ಯ ಹಾಗೂ ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ವಿಮರ್ಶಾತ್ಮಕ ಲೇಖನಗಳಿಂದ ಕೂಡಿದ್ದು, ಸಹೃದಯರಾದ ತಾವು ಓದಿ ಪ್ರತಿಕ್ರಿಯಿಸಬೇಕೆಂದು ನಮ್ಮ ಬಳಗದ ವಿನಮ್ರ ಮನವಿ. ತಮ್ಮ ಸಲಹೆ ಸೂಚನೆಗಳಿಗೆ ಸದಾ ಸ್ವಾಗತ.

ವಂದನೆಗಳೊಂದಿಗೆ,

ಡಾ.ವಿವೇಕಾನಂದ ಸಜ್ಜನ